ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸದುರ್ಗ

**ಸಿ.ಸಿ.33 /2023**

| | | |
|---|---|---|
| ಸಾಕ್ಷಿದಾರರ ಹೆಸರು : | ಜಯರಾಜ್ | ಪ್ರಮಾಣ ವಚನ ಬೋಧಿಸಿದ ದಿನಾಂಕ: 26**.02.2026** |
| ತಂದೆಯ ಹೆಸರು : | ಎಸ್ ಆರ್ ಜಾನಯ್ಯ | |
| ವಯಸ್ಸು : | 50 ವರ್ಷ | ಪಿ.ಡಬ್ಲ್ಯೂ-**02** |
| ಉದ್ಯೋಗ : | ಮುಖ್ಯ ಪೇದೆ ನಂ. 1251 | ಸಿ.ಡಬ್ಲ್ಯೂ-**07** |
| ವಾಸ ಸ್ಥಳ : | ಹೊಸದುರ್ಗ | |

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ. ರವರಿಂದ :-**

1. ನಾನು, 2021 ರಿಂದ ಇಲ್ಲಿಯವರೆಗೂ ಹೊಸದುರ್ಗ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯವನ್ನು ನಿರ್ವಹಿಸಿತ್ತಿದ್ದೇನೆ.

**ದಿಃ** 01.07.2021 **ರಂದು** ರಾತ್ರಿ 8-30 ರ ಸಮಯದಲ್ಲಿ ನಾನುಠಾಣಾಧಿಕಾರಿಯಾಗಿದ್ದಾಗ ಚಾಸಾ 01 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ದೂರನ್ನು ಸ್ವೀಕರಿಸಿ, ಠಾಣೆ ಗುನ್ಯ ಸಂಖ್ಯೆ 333/2021 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ದಿಃ 02.07.2021 ರಂದು ಗುನ್ಯ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಚಾಸಾ 02 ಮತ್ತು 3 ರವರ ಸಮಕ್ಷಮ ಚಾಸಾ 01 ರವರು ತೋರಿಸಿದ ಮೇರೆಗೆ ಮಧ್ಯಾಹ್ನ 3-00 ರಿಂದ 4-00 ರವರೆಗೆ ಪಂಚನಾಮೆಯನ್ನು ಮಾಡಿ ಒಂದು ಕೋಲು ಮತ್ತು ಒಂದು ಹಿಡಿ ಗಾತ್ರದ ಕಲ್ಲನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಅದೇ ಸಮಯದಲ್ಲಿ ಕಚ್ಚಾನಕಾಶೆಯನ್ನು ತಯಾರಿ ಮಾಡಿರುತ್ತೇನೆ. ಅದೇ ದಿನ ಚಾಸಾ-4 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 25.07.2021 ರಂದು ಚಾಸಾ 06 ರವರಿಂದ ಚಾಸಾ 01 ರವರ ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿ, ತನಿಖೆಯನ್ನು ಪೂರ್ಣಗೊಳಿಸಿ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿ ಫಿರ್ಯಾದಿಯನ್ನು ನೋಡಿ ಗುರುತಿಸಿದ್ದ, ಅದನ್ನು ನಿಪಿಃ 02 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಗುನ್ಯಸ್ಥಳ ಪಂಚನಾಮೆ ಮತ್ತು ಕಚ್ಚಾನಕಾಶೆಯನ್ನು ನೋಡಿ ಗುರುತಿಸಿದ್ದ, ಅವುಗಳನ್ನು ನಿಪಿಃ 03 ಮತ್ತು 04 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 3(ಎ) ಮತ್ತು 4(ಎ)ಎಂದು ಗುರುತಿಸಲಾಯಿತು. ಸಾಕ್ಷಿ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದ, ಅದನ್ನು ಈಗಾಗಲೇ ನಿಪಿಃ 01 ಎಂದು ಗುರುತಿಸಲಾಗಿದೆ. ಸಾಕ್ಷಿ ಪ್ರ.ವ. ವರದಿಯನ್ನು ನೋಡಿ ಗುರುತಿಸಿದ್ದ, ಅದನ್ನು ನಿಪಿಃ 05 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿಃ 5(ಎ)ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದಲ್ಲಿರುವ ಒಂದು ಕೋಲು ಮತ್ತು ಒಂದು ಕಲ್ಲನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮುದ್ದೆ ಮಾಲು 1 ಮತ್ತು 2 ಎಂದು ಗುರುತಿಸಲಾಗಿದೆ.

<u>ಪಾಟೀಸವಾಲು: ಆರೋಪಿಗಳ ಪರ: ಶ್ರೀ ಓ ಎಂ   ವಕೀಲರಿಂದ:</u>

ಈ ಕೇಸಿಗೆ ಸಂಬಂಧಪಟ್ಟಂತೆ ಸರ್ಕಾರಿ ಆಸ್ಪತ್ರೆಯಿಂದ ಮಾಹಿತಿ ಬಂದಿತ್ತು, ಅದರೆ ಹೆಚ್ಚಿನ ಚಿಕಿತ್ಸೆಗಾಗಿ ಬೇರೆ ಆಸ್ಪತ್ರೆಗೆ ಹೋಗಿದ್ದ. ಸದರಿ ಆಸ್ಪತ್ರೆಗೆ ಹೋಗಿ ಗಾಯಾಳುವಿನ ಹೇಳಿಕೆ ಪಡೆಯಲು ತೊಂದರೆ ಇತ್ತು ಎಂದರೆ ಸಾಕ್ಷಿ ಆ ಆಸ್ಪತ್ರೆಯಿಂದ ಮಾಹಿತಿ ಬಂದಿರಲಿಲ್ಲ ಎಂದು ಹೇಳುತ್ತಾರೆ. ಗಾಯಾಳು ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಹೆಚ್ಚಿನ ಚಿಕಿತ್ಸೆಗೆ ದಾಖಲಾಗಿದ್ದ ಎಂದು ಗೊತ್ತಿರುವುದಿಲ್ಲ. ನಾನೇ ಸುಳ್ಳು ಪಿರ್ಯಾದನ್ನು ತಯಾರು ಮಾಡಿ ಪ್ರ. ವ.ವರದಿಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪಂಚನಾಮೆಯ ಕಾಲದಲ್ಲಿ ನಾವು ಒಟ್ಟು 5 ಜನ ಇದ್ದೇವು. ಸದರಿ ಪಂಚನಾಮೆಗೆ 4 ಜನರು ಸಹಿಯನ್ನು ಮಾಡಿರುತ್ತೇವೆ. ಸದರಿ ಪಂಚನಾಮೆಯನ್ನು ತನಿಖಾ ಸಹಾಯಕನಾದ ಲಿಂಗರಾಜು ಇವರ ಹಸ್ತಾಕ್ಷರದಿಂದ ಬರೆಯಲಾಗಿದೆ. ಸದರಿ ಲಿಂಗರಾಜು ಇವರ ಸಹಿಯನ್ನು ಪಂಚನಾಮೆಗೆ ಪಡೆದಿಲ್ಲ. ಪಂಚನಾಮೆ ಮಾಡಿದ ಸ್ಥಳವು ಸಾರ್ವಜನಿಕ ಸ್ಥಳ ಇರುತ್ತದೆ. ಗಲಾಟೆಯಾದ ದಿನಾಂಕಕ್ಕೂ ನಾವು ಪಂಚನಾಮೆ ಮಾಡಿದ ದಿನಾಂಕಕ್ಕೂ ಮಧ್ಯ 6 ದಿನ ಅಂತರ ಇರುತ್ತದೆ ಎನ್ನುವುದು ನಿಜ. ಗುನ್ಹೆ ಸ್ಥಳದಲ್ಲಿ ಮುದ್ದೆ ಮಾಲು 1 ಮತ್ತು 2 ಇರಲಿಲ್ಲ ಎಂದರೆ ಸರಿಯಲ್ಲ. ಈ ಕೇಸಿನ ಅನುಕೂಲಕ್ಕೋಸ್ಕರ ಮುದ್ದೆ ಮಾಲು 1 ಮತ್ತು 2ನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ನಾನು ಕಚ್ಚಾ ನಾಕಾಶೆಯನ್ನು ತಯಾರು ಮಾಡಿಲ್ಲ ಎಂದರೆ ಸರಿಯಲ್ಲ. ಪಿರ್ಯಾದುದಾರರಿಗೆ ಅನುಕೂಲ ಆಗಲಿ ಎಂದ ಠಾಣೆಯಲ್ಲಿಯೇ ನಿಪಿ: 2 ಮತ್ತು 3 ನ್ನು ತಯಾರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಗಾಯದ ಪ್ರಮಣ ಪತ್ರವನ್ನು ನಾನು ಸ್ವೀಕಾರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 04 ಮತ್ತು 5 ರವರ ಹೇಳಿಕೆಯನ್ನು ನಾನು ಪಡೆದಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿಗೆ ಅನುಕೂಲ ಆಗಲಿ ಎಂದು ಯಾವುದೇ ತನಿಖೆಯನ್ನು ಮಾಡದೇ ಇದ್ದರು ಸಹ ಸುಳ್ಳು ದೋಷಾರೋಪಣಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ: ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.